ದಿನಾಂಕ: 14-01-2026 ರಂದು ಸಾಕ್ಷಿಯನ್ನು ಪುನ: ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು : 1 ರಿಂದ 6 ನೇ ಪ್ರತಿವಾದಿ ಪರ ಮಾನ್ಯ ಎ.ಜಿ.ಪಿ ರವರಿಂದ,**

ನನ್ನ ಊರು ಕುರೆಕುಪ್ಪಾ ಗ್ರಾಮ. ಕುರೆಕುಪ್ಪಾ ಗ್ರಾಮದಲ್ಲಿ ನನ್ನ ಜಮೀನು ಸರ್ವೆ ನಂಃ418 ಇರುತ್ತದೆ. ಅದು ಒಟ್ಟು 22 ಎಕರೆ ಇರುತ್ತದೆ. ನನಗೆ ಸಂಬಂದಪಟ್ಟಂತೆ ಮೂರುವರೆ ಎಕರೆ ಜಮೀನು ಇರುತ್ತದೆ. ಸದರಿ ಜಮೀನು ನನ್ನ ಗಂಡನ ತಂದೆಯ ಕಡೆಯಿಂದ ಬಂದಿರುತ್ತದೆ. ನನ್ನ ಜಮೀನಿನ ಚೆಕ್‌ಬಂದಿ ಪೂರ್ವಕ್ಕೆ ನನ್ನ ಜಮೀನು, ಪಶ್ಚಿಮಕ್ಕೆ ನನ್ನ ಜಮೀನು, ಉತ್ತರ ಕ್ಕೆ ನನ್ನ ಮೈದುನನ ಜಮೀನು ಮತ್ತು ದಕ್ಷಿಣಕ್ಕೆ ನನ್ನ ಮೈದುನನ ಜಮೀನು ಇರುತ್ತದೆ.

ಸರ್ಕಾರದವರು ಸದರಿ ಜಮೀನಿನಲ್ಲಿ ರಸ್ತೆ ಮಾಡಲು ಭೂಸ್ವಾಧಿನ ಅಧಿಕಾರಿ ಮತ್ತು ಜಿಲ್ಲಾಧಿಕಾರಿಗಳು ಅಧಿಸೂಚನಾ ಪ್ರಕಟವನ್ನು ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರಸ್ತೆ ಅಗಲಿಕರಣಕ್ಕಾಗಿ ದಿಃ23.09.1996 ರಲ್ಲಿ ಲೋಕದರ್ಶನ ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟಣೆ ಮಾಡಿರುತ್ತಾರೆ ಎಂದರೆ ಸರಿ. ದಿಃ27.10.1996 ರಂದು ಹೋರಾಟ ದಿನಪತ್ರಿಕೆಯಲ್ಲಿ ಪ್ರಕಟಣೆ ಮಾಡಿರುತ್ತಾರೆ ಎಂದರೆ ಸರಿ. ದಿಃ19.10.1996 ರಂದು ಕುರೆಕುಪ್ಪಾ ಗ್ರಾಮದ ಮುಖ್ಯ ಸ್ಥಳದಲ್ಲಿ ಮತ್ತು ಸಾರ್ವಜನಿಕ ಸ್ಥಳದಲ್ಲಿ ಸದರಿ ಪ್ರಕಟಣೆಯನ್ನು ಅಂಟಿಸಿರುತ್ತಾರೆ ಎಂದರೆ ಸರಿ. ನಂತರ ಭೂಸ್ವಾಧಿನ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ನನ್ನನ್ನು ಮತ್ತು ಉಳಿದ ವಾದಿಗಳಿಗೆ ವಿಚಾರಣೆಗೆ ಹಾಜರಾಗಲು ನೋಟಿಸ್ ನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ವಿಚಾರಣೆಗೆ ನಾವು ಹಾಜರಾಗಿರುತ್ತೇವೆ. ನಾವು ಅಲ್ಲಿಗೆ ಹೋಗಿ ಯಾವುದೇ ಆಕ್ಷೇಪಣೆ ಸಲ್ಲಿಸಿರುವುದಿಲ್ಲ. ಈ ವಿಷಯ ಕಲ್ಲಗುಡೆಯಪ್ಪ ರವರಿಗೆ ಗೊತ್ತು. ಅವರು ಏನು ಹೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಕಾರಣ ನಾನು ಹೋರಗೆ ನಿಂತಿದ್ದೆ.

1996 ನೇ ಇಸ್ವಿಯಲ್ಲಿ ನಮ್ಮ ಜಮೀನಿಗೆ ಎಷ್ಟು ಬೆಲೆ ಇತ್ತು ಎಂದು ಹೇಳಲಾಗುವುದಿಲ್ಲ. ಗ್ರಾಮಲೆಕ್ಕಾಧಿಕಾರಿ ಮತ್ತು ಭೂಸ್ವಾಧಿನ ಅಧಿಕಾರಿಗಳು ನಮ್ಮ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥಳ ಸಮಕ್ಷಮದಲ್ಲಿ 1 ಎಕರೆಗೆ ರೂ.9 ಸಾವಿರಗಳಿಗೆ ನಮ್ಮ ಜಮೀನು ಬಾಳುತ್ತಿತ್ತು ಎಂದು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ಕಾರಿ ಕಾಮಗಾರಿಗೆ ಅಡ್ಡಿಪಡೆಸಲು ಮತ್ತು ದುರೂದ್ವೇಷದಿಂದ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ

ಗ್ರಾಮದಲ್ಲಿ ಭೂಸ್ವಾಧಿನ ಅಧಿಕಾರಿಗಳಿಂದ ಪರಿಹಾರ ಪಡೆದಿದ್ದು, ನನಗೆ ಬರತಕ್ಕ ಹಣವನ್ನು ಕಂದಾಯ ಠೇವಣಿಯಾಗಿ ಜಮಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಈಗಲೂ ಸಹ ಠೇವಣೆಯಲ್ಲಿ ಇರುತ್ತದೆ ಎಂದರೆ ಸರಿ. ಸರ್ಕಾರಿ ಯೋಜನೆಗಳಿಗೆ ಅಡ್ಡಿಪಡಿಸಲು ನಾನು ಮತ್ತು ಕೆಲವು ಗ್ರಾಮದ ಕುಟುಂಬಸ್ಥರು ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.